228

121

ತಾರೀಖು 6ನೇ ಮಾರ್ಚ್ 1877.

ಇದರಿಂದ ತಿಳಿಯಗಡಿಸುವದೇನಂದರೆ,—ಶಿವಮಗ್ಗಾ ಡಿಸ್ಟ್ರಿಕ್ಟ್ ಜುಡಿಷಿಯಲ್ ಅಸಿಸ್ಟೆಂಟ್ ಕೋರ್ಟ್ 1877ನೇ ಇಸವೀ ಮಾರ್ಚ್ ಗುರ್ವೀ ಲಗಾಯತು ಏಪ್ರೆಲ್ ಆಖೈರ್ ವರಿವಿಗೆ ಎರಡು ತಿಂಗಳು ಮುಚ್ಚಲ್ಪಡುತ್ತೆ.

2. ಹಾಂಗೆ ಮುಚ್ಚಲ್ಪಟ್ಟ್ಯ ಕಾಲದಲ್ಲಿ ಕೋರ್ಟ್ ಹೆಡ್ ಕ್ಲರ್ಕರು ಪ್ರತಿ ಸೋಮವಾರ ವ ಬೃಹಸ್ಪತಿವಾರ ಈ ಎರಡು ದಿನಗಳಲ್ಲಿ ಆಫೀಸಿಗೆ ಬರುತ್ತಾರೆ, ಯಾವ ಬಗ್ಯೆ ಅಂದರೆ,—

(a) ಕಕ್ಷಿಗಾರ್ರು ಹಾಜರ್ಮಾಡಲಿಚ್ಛೈಸುವ ದಾವೆಗಳನ್ನು, ಅರ್ಜೀಗಳನ್ನು, ಅಮಲ್‌ಜಾರೀ ವಗೈರೇ ಬಗ್ಯೆ ಅರ್ಜೀಗಳನ್ನು, ತೆಗದುಕ್ಕೊಳ್ಳಲಿಕ್ಕೂ.

(b) ಸಾದರಾತೀ ಬಗ್ಯೆ ಇತರ ಕೋರ್ಟುಗಳಿಂದ ಬರುವ ಸಮ್ಮನ್ಸಗಳು, ಇತರ ಪ್ರೊಸೆಸ್‌ಗಳು, ಇವುಗಳನ್ನು ಜಾರೀಲಿ ತರತಕ್ಕ ಬಗ್ಯೂ.

(c) ಅಪ್ಪೀಲಾದ ಮೊಕದ್ದಮೆಗಳಲ್ಲಿ ರಿಕಾರ್ಡ್ ರವಾನೆ ಬಗ್ಯೆ ಕಮ್ಮಿಷನರವರ ಕೋರ್ಟ್‌ನಿಂದ ಬರುವ ಹುಕ್ಕುಂಗಳಿಗೆ ನಿಗೇ ಕೊಡತಕ್ಕ ಬಗ್ಯೂ, ಮತ್ತು.

(d) ಕಕ್ಷಿಗಾರ್ರು ಕೇಳಿಕ್ಕೊಳ್ಳುವ ಜಡ್ಜ್‌ಮೆಂಟ್, ಡಿಕ್ರೀ ವ ಹುಕ್ಕುಂ ಇವುಗಳ ಸೈರ್ ಮೊಹರ್‌ನಿಸೀ ಇರುವ ಕಾಫೀಗಳನ್ನು ಕೊಡಲಿಕ್ಕೂ.

3. ಡಿಕ್ರೀ ಬಾಬತು ಹಣಾ ಪಾವತೀ ಮಾಡಲಿಕ್ಕೆ ಅಪೇಕ್ಷಿಸುವ ಕಕ್ಷಿಗಾರ್ರು ಹೆಡ್ ಕ್ಲರ್ಕ್‌ರಿಂದ ಮಾಮೂಲ್ ಮೇರೆ ಡಿಪಾಜಿಟ್ ಆರ್ಡರ್ ಪಡೆದು ಡಿಸ್ಟ್ರಿಕ್ಟ್ ಟ್ರೆಜರೀಯಲ್ಲಿ ಹಣ ಪಾವತೀ ಮಾಡತಕ್ಕದ್ದೆಂತ ಆಜ್ಞಾಪಿಸಲ್ಪಟ್ಟ್ಯರುತ್ತಾರೆ, ಅಂತಾ ಆರ್ಡರಿಗೆ ಹೆಡ್‌ಕ್ಲರ್ಕ್‌ರು "ಫಾರ್ ಜುಡಿಷಿಯಲ್ ಅಸಿಸ್ಟೆಂಟ್" ಯೆಂಬದಾಗಿ ದಸ್ತಿಖತ್ ಮಾಡತಕ್ಕದ್ದು.

4. ಕೋರ್ಟು ಹುಕ್ಕುಂನಿಂದ ಶಿವಮಗ್ಗಾ ಡಿಸ್ಟ್ರಿಕ್ಟ್ ಸಿವಿಲ್ ಜೈಯಿಲ್‌ನಲ್ಲಿ ಇಡಲ್ಪಟ್ಟ್ಯರುವ ಪ್ರತಿವಾದಿಗಳಿಗೆ ಭತ್ಯವೆನ್ನು ಅಡ್ವಾನ್ಸ್ ಕಟ್ಟುತಕ್ಕ ಬಗ್ಯೆ ಅಪೇಕ್ಷಿಸುವ ಕಕ್ಷಿಗಾರ್ರು ಸೆ॥ 1759ನೇ ಇಸವೀ 8ನೇ ನಂಬರ್ ಆಕ್ಟಿನ 276ನೇ ಸೆಕ್ಷನ್ ಪ್ರಕಾರ ಜೈಯಿಲ್ ಸೂಪ್ರಿಂಟೆಂಡೆಂಟರ ವಕದಲ್ಲಿ ಪಾವತೀ ಮಾಡತಕ್ಕದ್ದು.

J. D. GORDON, *Judl. Commr.*

ಇನಾಂ ಇಲಾಖಾ.

ನಂ. 19. ತಾರೀಖು 16ನೇ ಫಿಬ್ರವರೀ 1877.

ಇದರಿಂದ ಪ್ರಕಟಿಸುವದೇನಂದರೆ,—ಶಿಡ್ಲಘಟ್ಟದ ತಾಲ್ಲೂಕಿನಲ್ಲಿರುವ ಈ ಮಾರ್ಜಿನಲ್ಲಿ ಕಂಡ ಇನಾಮಿಗಾಗಿ ಶಿಡ್ಲಘಟ್ಟದ ಸುಬ್ಬಾಶಾಸ್ತ್ರಿ ಯೆಂಬವರ ಹೆಸರಿನಲ್ಲಿ ಕೊಡಲ್ಪಟ್ಟ 986ನೇ ನಂಬರ್ ಟೈಟಲ್ ಡೀಡ್, ಹುಕ್ಕುಂ ಮಾಫಕ್, ಈ ಆಫಿಸಿಗೆ ಸದರೀಯವರಿಂದ ವಾಪಸ್ ಮಾಡಲ್ಪಡದ ಸಬಬ್ ಸದರೀ ಟೈಟಲ್ ಡೀಡ್ ರದ್ದಾಗಿರುತ್ತೆಂಬ ಇದರಿಂದ ತಿಳಿಸಲ್ಪಟ್ಟು ಸದರೀ ಸುಬ್ಬಾಶಾಸ್ತ್ರಿ ಅತನ ಸಹೋದರ ನಾರಾಯಣಶಾಸ್ತ್ರಿ ಯಿವರುಗಳ ಹೆಸರಿನಲ್ಲಿ 1876ನೇ ಆಗಸ್ಟ್ 16ನೇ ಮತ್ತು 84ನೇ ನಂಬರ್ ಬಾಬತು ಚೀಫ್ ಕಮ್ಮಿಷನರ್ ಪ್ರೋಸೀಡಿಂಗ್ಸ್ ಮೇರೆ ಡ್ಯೂಪ್ಲಿಕೇಟ್ ನಕ್ಕಲ್ ಕೊಡಲ್ಪಡುವದು.

ಸಮ್ಮತು.	ಗ್ರಾಮ.	ಖುಷ್ಕೀ ಬೀಜವರಿ.		ಕಂದಾಯ.	ಕ್ವಿಟ್‌ರೆಂಟ್.
		ಜಮ್ಮಾ.	ಎ. ಗುಂ.	ರೂ. ಆ. ಪೈ.	ರೂ. ಆ. ಪೈ.
ಸಿಡ್ಲಘಟ್ಟ.	ಅಬ್ಬಲೋಡು.	145 223 225	4·38	6-4-6	0 14 0

R. A. COLE, *Supt. of Inam Settlements.*

BANGALORE DISTRICT.

ಬೆಂಗಳೂರು ಡಿಸ್ಟ್ರಿಕ್ಟ್.

ತಾರೀಖು 11ನೇ ಅಕ್ಟೋಬರ್ 1876.

ಸಕಲಜನಗಳಿಗೂ ತಿಳಿಯುವ ಬಗ್ಯೆ ಯಿದರಿಂದ ತಿಳಿಸಲ್ಪಡುವದೇನಂದರೆ,—(ಫಾರೆಸ್ಟ್ ಯಿಲಾಖೆಗೆ ಸೇರಿದ ಜಂಗ್ಲೀಗಳು ಹೊರತಾಯಿ) ಬೆಂಗಳೂರು ಡಿಸ್ಟ್ರಿಕ್ಟ್ ಜಂಗ್ಲೀಗಳ ಬಾಬತು ಆರಗಿನ ಕಂಟ್ರಾಕ್ಟ್ 1877—78,—1878—79,—1879—80,